**ದಿನಾಂಕಃ 16.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**<u>ಮುಂದುವರಿದ ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಸ್.ಎನ್.ಎನ್ ಅವರಿಂದ–</u>**

1. ನಿಪಿ.1 ಕ್ಕೆ ನಾನು ಮೊದಲ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.1 ರಲ್ಲಿರುವ 3 ನೇ ಪುಟದಲ್ಲಿರುವ ಸಹಿ ನನ್ನದೆ ಎಂದು ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ನಿಪಿ.1 ರ ರಿಜಿಸ್ಟರ್ ನಂಬರ್ ಅನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿ. ನಿಪಿ.1 ಕ್ಕೆ ನನ್ನ ಜೊತೆ ವೆಂಕಟೇಶ ಸಹಿ ಮಾಡಿರುತ್ತಾರೆ. ಈ ಹಂತದಲ್ಲಿ ಸಾಕ್ಷಿದಾರರಿಗೆ ತೋರಿಸಿದ ನೊಂದಣಿಯಾಗದ ಒಂದು ಕ್ರಯ ಕರಾರು ಪತ್ರದ ಜೆರಾಕ್ಸ್ ಪ್ರತಿ ತೋರಿಸಿ ಅದರಲ್ಲಿ ನೀವು ಸಹಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಆ ಸಹಿ ನನ್ನದಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಕ್ರಯ ಕರಾರು ಪತ್ರ ನಿಪಿ.1 ರಲ್ಲಿ ರಿಜಿಸ್ಟರ್ ಸಂಖ್ಯೆ ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕೇವಲ ನೊಂದಣಿಯಾಗಿರುವ ದಾಖಲಾತಿಗೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

2. ಸಾಮಾನ್ಯವಾಗಿ ಪತ್ರಕ್ಕೆ ಸಹಿ ಮಾಡುವಾಗ ನಾನು ಪತ್ರದಲ್ಲಿರುವ ವಿಚಾರ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಅದೇ ರೀತಿ ನಾನು ದಿಃ 15.07.2013 ರ ನೊಂದಣಿಯಾಗದ ಕ್ರಯ ಕರಾರು ಪತ್ರದಲ್ಲಿ ಬರೆದಿರುವ ಒಕ್ಕಣಿಕೆ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಾಗಾದರೆ ದಿಃ 15.07.2013 ರ ನೊಂದಣಿಯಾಗದ ಕ್ರಯ ಕರಾರು ಪತ್ರದಲ್ಲಿ ಬರೆದಿರುವ ಒಕ್ಕಣಿಕೆ ಸುಳ್ಳು ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ದಿಃ 15.07.2013 ರ ನೊಂದಣಿಯಾಗದ ಕ್ರಯ ಕರಾರು ಪತ್ರದ ಪ್ರಕಾರ ವಾದಿಯ ಗಂಡ ಪ್ರತಿವಾದಿಗೆ 2,00,000/– ರೂ. ಗಳನ್ನು ಸಾಲ ನೀಡಿರುತ್ತಾರೆ ಎಂದರೆ ನಾನು ನೋಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

3. ನಿಪಿ.4 ದಿಃ 29.12.2015 ರ ಪೂರಕ ಕ್ರಯ ಕರಾರು ಪತ್ರವನ್ನು ಎಷ್ಟು ಜನ ಸೇರಿ ವಾದಿಯರಿಗೆ ಬರೆದುಕೊಟ್ಟಿರುತ್ತಾರೆ ಎಂಬ ಪ್ರಶ್ನೆಗೆ ಶಿವಣ್ಣ, ಅವರ ಹೆಂಡತಿ, ಅವರ ಮಗ–ಮಗಳು ಸೇರಿ ಬರೆದುಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.4 ರಲ್ಲಿ ನಿಪಿ.1 ರ ನೊಂದಣಿ ಸಂಖ್ಯೆ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ.4 ರಲ್ಲಿ ನಾನು ಮೊದಲ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.4 ರ ಒಕ್ಕಣಿಕೆ ಓದಿಕೊಂಡೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

4. ನಿಪಿ.4 ರ ಪ್ರಕಾರ ವಾದಿಯಾಗಲಿ ಅವರ ಗಂಡನಾಗಲಿ ಪ್ರತಿವಾದಿಯರಿಗೆ ರೂ.2,00,000/- ಸಾಲ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ, ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪತ್ರ ನಿಪಿ.4 ಅನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

5. ನಿಪಿ.3 ಮೊದಲನೆ ಪತ್ರವನ್ನು 3 ಜನ ಬರೆದುಕೊಟ್ಟಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಾದಿಪರ ವಕೀಲರಾದ ನರಸಿಂಹೇಗೌಡ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ನೋಟರಿ ಅವರ ಶೀಲು ಸಹಿ ಸುಳ್ಳಾ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ನೋಟರಿ ಅವರ ಮುಂದೆ ಹೋಗಿಲ್ಲ, ಅವರ ಮುಂದೆ ಪ್ರಮಾಣೀಕರಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ದಿಃ15.07.2013 ರ ಕ್ರಯ ಕರಾರು ಪತ್ರಕ್ಕೆ ಸಹಿ ಮಾಡಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಾನು 15.07.2013 ರ ಪತ್ರ ಬಿಟ್ಟು ಬೇರೆ ಎಲ್ಲಕ್ಕೂ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ.

6. ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ವೆಂಕಟೇಶ ಹಾಗೂ ರಾಜು ಅವರ ಮಾವ ಚಂದ್ರೇಗೌಡ ಒಟ್ಟಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ರಾಜು ಅವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯರು ಹೇಳಿಕೊಟ್ಟ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.